ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1408/2014

ಚಾಸಾ-1 ಪ್ರಾಸಾ:1

ದಿನಾಂಕ: 13.01.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಧರ್ ಶೆಟ್ಟಿ |
| ತಂದೆಯ ಹೆಸರು | : | ಕೃಷ್ಣಯ್ಯ ಶೆಟ್ಟಿ |
| ವಯಸ್ಸು | : | 79 ವರ್ಷ |
| ಉದ್ಯೋಗ | : | ನಿವೃತ್ತ ಶಿಕ್ಷಕ |
| ವಾಸ ಸ್ಥಳ | : | ತಲ್ಲೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 08-08-2008 ರಂದು ನಾನು ತಲ್ಲೂರು ಮಹಾದೇವಿ ಕುಂತಿಯಮ್ಮ ದೇವಸ್ಥಾನದಲ್ಲಿ ಕಳ್ಳತನವಾಗಿದ್ದ ಬಗ್ಗೆ ನಾನು ಪಿರ್ಯಾದಿಯನ್ನು ಕೊಟ್ಟಿರುತ್ತೇನೆ. ನಾನು ಆ ಸಮಯದದ್ಲಿ ದೇವಸ್ಥಾನದ ಕಾರ್ಯದರ್ಶಿಯಾಗಿದ್ದು, 1986ನೇ ಇಸವಿಯಿಂದ ನಾನು ಸದ್ರಿ ದೇವಸ್ಥಾನದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 06-08-2008 ರಂದು ರಾತ್ರಿ ಕಳ್ಳತನವಾಗಿದ್ದು ದಿ: 07-08-2008 ರಂದು ಬೆಳಗ್ಗೆ 6-30 ಗಂಟೆ ಸಮಯಕ್ಕೆ ತಿಳಿಯಿತು. ಸದ್ರಿ ದೇವಸ್ಥಾನದ ಅರ್ಚಕರು ಪೂಜೆಗೆಂದು ಬಂದಿದ್ದಾಗ ಅವರಿಗೆ ಕಳ್ಳತನದ ವಿಷಯ ತಿಳಿದಿದ್ದು, ವಿಷಯ ತಿಳಿದ ಕೂಡಲೇ ನಾನು ದೇವಸ್ಥಾನಕ್ಕೆ ಹೋಗಿದ್ದು, ಅಲ್ಲಿ ಹೋಗಿ ನೋಡಿದಾಗ ದೇವಸ್ಥಾನದ ಗರ್ಭಗುಡಿಯ ದ್ವಾರದ ಚಿಲಕ ಮುರಿದಿತ್ತು. ಮಹಾಕಾಳಿ, ಸರಸ್ವತಿ ಮತ್ತು ಮಹಾಲಕ್ಷ್ಮೀ ದೇವಿಯ ಬೆಳ್ಳಿಯ ಮುಖವಾಡಗಳು, ಒಂದು ಬೆಳ್ಳಿಯ ಹರಿವಾಣ ಮತ್ತು ಒಂದು ಬೆಳ್ಳಿಯ ತೀರ್ಥದ ಲೋಟ ಮತ್ತು ಚಮಚ , ದೇವರಿಗೆ ಹಾಕುವ ಮೂರು ಬೆಳ್ಳಿ ಹಾರಗಳು ಕಳ್ಳತನವಾಗಿದ್ದವು. ಕೂಡಲೇ ನಾವು ಪೋನ್ ಮೂಲಕ ಪೊಲೀಸರಿಗೆ ತಿಳಿಸಿದ್ದು ಪೊಲೀಸರು ದಿ: 07-08-2008 ರಂದು ಸ್ಥಳಕ್ಕೆ ಬಂದು ನಂತರ ದಿ: 08-08-2008 ರಂದು ನಾನು ಲಿಖಿತ ಪಿರ್ಯಾದಿಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ.

ಕಳ್ಳತನವಾದ ಬೆಳ್ಳಿಯ ಮುಖವಾಡಗಳು ಸುಮಾರು 1 ಕೆ.ಜಿ ತೂಕದಾಗಿದ್ದು ಆ ಸಮಯದಲ್ಲಿ ಅವುಗಳ ಮೌಲ್ಯ ಸುಮಾರು 22,000/- ರೂಪಾಯಿ ಇರಬಹುದು. ಉಳಿದ ಬೆಳ್ಳಿಯ ಸಾಮಾಗ್ರಿಗಳು

ಒಟ್ಟು ಅರ್ಧ ಕೆ.ಜಿ ಇರಬಹುದು. ಪೂಜೆಯಾದ ನಂತರ ದಿನಾಲೂ ಬೆಳ್ಳಿಯ ಮುಖವಾಡ ಮತ್ತು ಇತರ ಬೆಳ್ಳಿಯ ಸಾಮಾಗ್ರಿಗಳನ್ನು ಗರ್ಭಗುಡಿಯಲ್ಲಿ ದೇವರನ್ನು ಇಡುವ ಹಿಂದುಗಡೆ ಪೆಟ್ಟಿಗೆಯಲ್ಲಿ ಇಡುತ್ತಿದ್ದೇವು.

ದಿಃ 08-08-2008 ರಂದು ಪೊಲೀಸರು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿದ್ದು ಸ್ಥಳವನ್ನು ಪರಿಶೀಲನೆ ಮಾಡಿ ಮಹರನ್ನು ತಯಾರಿಸಿ ಆ ಸಮಯದಲಿಲ ಬೀಗದ ಕೊಂಡಿ ಮತ್ತು ಒಂದು ಬೀಗವನ್ನು ಅಮಾನತು ಪಡಿಸಿಕೊಂಡಿದ್ದು, ಆ ಸಮಯದಲ್ಲಿ ಅಲ್ಲಿ ಪ್ರಕಾಶ ಅಡಿಗ ಮತ್ತು ಹರೀಶ ಎನ್ನುವವರು ಹಾಜರು ಇದ್ದು, ಅಲ್ಲಿ ತಯಾರಿಸಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

ದೇವಸ್ಥಾನದ ಗರ್ಭಗುಡಿಯ ಉದ್ದ ಅಗಲ ಎಲ್ಲಾ ತಿಳಿದುಕೊಂಡು ಆ ಬಗ್ಗೆ ಬರವಣಿಗೆ ಮಾಡಿರುತ್ತಾರೆ. ಆ ಸಮಯದಲ್ಲಿ ನಕಾಶೆಯನ್ನು ತಯಾರಿಸಿದ್ದು, ಸದ್ರಿ ನಕಾಶೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆ ದಿನ ಬಂದಾಗ ಪೊಲೀಸರು ನನ್ನ ಮರುಹೇಳಿಕೆಯನ್ನು ಸಹ ಪಡೆದಿರುತ್ತಾರೆ. ಮರುಹೇಳಿಕೆಯಲ್ಲಿ ಕಳ್ಳತನವಾದ ಬಗ್ಗೆ ಹೇಳಿರುತ್ತೇನೆ.

2008 ಅಕ್ಟೋಬರ್ ನಲ್ಲಿ ಪೊಲೀಸರು ಠಾಣೆಗೆ ಕರೆಯಿಸಿ ದೇವಸ್ಥಾನದ ಬೆಳ್ಳಿಯ ಆಭರಣಗಳನ್ನು ತೋರಿಸಿರುತ್ತಾರೆ. ಪೊಲೀಸರು ಸದ್ರಿ ಸ್ವತ್ತುಗಳನ್ನು ಮಹಮ್ಮದ್ ನಿಯಾಸ್, ಮಹಮ್ಮದ್ ರಫೀಕ್ ಮತ್ತು ಅಬೂಬಕ್ಕರ್ ಎನ್ನುವವರು ಕಳ್ಳತನ ಮಾಡಿದ್ದಾಗಿ ತಿಳಿಸಿರುತ್ತಾರೆ. ಸದ್ರಿ ಸ್ವತ್ತುಗಳನ್ನು ನಾನು ಠಾಣೆಯಲ್ಲಿ ನೋಡಿ ಗುರುತಿಸಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಬೆಳ್ಳಿಯ ಸಾಮಾಗ್ರಿಗಳೇ ಆ ದಿನ ನಮ್ಮ ದೇವಸ್ಥಾನದಲ್ಲಿ ಕಳ್ಳತನವಾದ ಬೆಳ್ಳಿಯ ವಸ್ತುಗಳು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಮೂರು ಬೆಳ್ಳಿಯ ಮುಖವಾಡಗಳನ್ನು ಕ್ರಮವಾಗಿ ಮುಮಾ1 ರಿಂದ 3 ಎಂದು ಗುರುತಿಸಲಾಯಿತು. ಮೂರು ಬೆಳ್ಳಿಯ ಸರಗಳು, ಬೆಳ್ಳಿಯ ಹರಿವಾಣ, ಬೆಳ್ಳಿಯ ಲೋಟ, ಚಮಚ, ಒಂದು ಬೀಗ, ಬೀಗದ ಕೊಂಡಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮುಮಾ-4 ರಿಂದ 11 ಎಂದು ಗುರುತಿಸಲಾಯಿತು. ಸದ್ರಿ ವಸ್ತುಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು.

ಸಾಕ್ಷಿ ಪಿರ್ಯಾದಿ, ಮಹಜರು, ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ರಿಂದ 3 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ರಿಂದ 3(ಎ) ಎಂದು ಗುರುತಿಸಲಾಯಿತು.

ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ